7) ಟ್ರೈಸಮ್, ವಿಶ್ವ, ಆರ್. ಐ. ಪಿ, ಆರ್. ಎ. ಪಿ. ವಿಶೇಷ ಘಟಕ ಯೋಜನೆ, ಇತರೆ ಯೋಜನೆಯಲ್ಲಿ ತರಬೇತಿ ಹಾಗೂ ಹಣಕಾಸು ಸಂಸ್ಥೆಗಳಿಂದ ದುಡಿಯುವ ಬಂಡವಾಳ ಸೌಲಭ್ಯ.

8) ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ. ಸಾಲ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಅನುದಾನ ನೀಡಲಾಗುತ್ತದೆ.

9) ನೇಕಾರರ ಮನೆಗಳಿಗೆ ವಿದ್ಯುಚ್ಛಕ್ತಿಯ 2ದೀಪಗಳನ್ನು ಒದಗಿಸಲಾಗುತ್ತಿದೆ.

ಆ) ವಿದ್ಯುತ್‌ಚಾಲಿತ ಮಗ್ಗಗಳಿಗೆ :

1) ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮದಿಂದ ವಿದ್ಯುತ್‌ಚಾಲಿತ ನೇಕಾರರಿಗೆ ಮಾರುಕಟ್ಟೆ ಸೌಲಭ್ಯ ಹೊಸ ಮಗ್ಗಗಳನ್ನು ಖರೀದಿಗಾಗಿ ಹಾಗೂ ನವೀಕರಣಕ್ಕಾಗಿ ಸೌಲಭ್ಯ.

2) ಟ್ರೈಜಂ ವಿಶ್ವ, ಆರ್. ಐ.ಪಿ.ಆರ್.ಎ.ಪಿ. ವಿಶೇಷ ಘಟಕ ಯೋಜನೆ, ಇತರೆ ಯೋಜನೆಯಲ್ಲಿ ತರಬೇತಿ ಹಾಗೂ ಹಣಕಾಸು ಸಂಸ್ಥೆಗಳಿಂದ ದುಡಿಯುವ ಬಂಡವಾಳ ಸೌಲಭ್ಯ.

3) ಐ.ಆರ್.ಡಿ.ಪಿ. ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಹಾಗೂ ಜಿಲ್ಲಾ ಪಂಚಾಯತ್‌ವತಿಯಿಂದ ಅನುದಾನ ನೀಡಲಾಗುತ್ತದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರವು ಹೂಡಿದ ಬಂಡವಾಳ

1122(1619)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲಾದ ಸಣ್ಣ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಆ) ಸದರಿ ಸಣ್ಣ ಕೈಗಾರಿಕೆಗಳಿಗೆ ಕಳೆದ 3ವರ್ಷಗಳಲ್ಲಿ ಸರ್ಕಾರವು ಹೂಡಿದ ಬಂಡವಾಳವೆಷ್ಟು?

ಇ) ಯಾವ ಯಾವ ವಿಧದ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ?

ಶ್ರೀ ಬಸವರಾಜ.ಪಾಟೀಲ್ ಅಟ್ಟೂರು (ಸಣ್ಣಕೈಗಾರಿಕಾ ಸಚಿವರು) :

ಅ) 61,353

ಆ) ಸರ್ಕಾರ ಯಾವುದೇ ಬಂಡವಾಳ ಹೂಡಿರುವುದಿಲ್ಲ.

ಇ) ಜಿಲ್ಲೆಯ ಸಂಪನ್ಮೂಲಗಳ ಆಧಾರದ ಮೇಲೆ ಎಲ್ಲ 17ವರ್ಗಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. 17 ವರ್ಗಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

Annexure to L.A Question No.1619

Annexure-I

Categories of Industries :-

1) Food and Beverages
2) Textiles
3) Wood and wood products
4) Printing and stationery
5) Leather and leather goods
6) Rubber and plastics
7) Chemicals
8) Glass and ceremics
9) Basic metal and metal products
10) General Engineering
11) Electrical and electronics
12) Automobiles
13) Transport and equipment
14) Ferrous and non-ferrous
15) Job works and repairs
16) Other services
17) Miscellaneous